## Shortage of Food Supply

ಶ್ರೀ ಎಂ. ಎಸ್. ಕೃಷ್ಣನ್. – ಪ್ರಿವಿಲೇಜ್ ಮೋಷನ್ ನೋಟೀಸ್ ಕಳುಹಿಸಿದ್ದೇನೆ, ಬ್ಲಾಕ್ ಕಾಂಗ್ರೆಸ್ ಕಮಿಟಿ, ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಗಳನ್ನು ಸೇರಿಸಿ ಆಹಾರಧಾನ್ಯಗಳನ್ನು ವಿತರಣೆ ಮಾಡುತ್ತಿದ್ದಾರೆ.

ಅಧ್ಯಕ್ಷರು. —ಮಾನ್ಯ ಬಂಗಾರಪ್ಪನವರು ಮೊದಲು ಬಂತು, ನಿಮ್ಮ ನೋಟೀಸ್ ಮೊದಲು ಬರಲಿಲ್ಲ, ಅದನ್ನು ಕಳುಹಿಸಿಕೊಟ್ಟಿದ್ದೇನೆ.

ಶ್ರೀ ಕೋಣಂದೂರು ಲಿಂಗಪ್ಪ. —ಸರ್ಕಾರದ ಖಜಾನೆ ಕಾಂಗ್ರೆಸ್ ಕೈಯಲ್ಲಿ ಆಹಾರವೂ ಇವರ ಕೈಯಲ್ಲಿ ಇದ್ದೆರೆ ಹೇಗೆ ?

ಅಧ್ಯಕ್ಷರು. —ಉತ್ತರ ಬಂದಾಗ ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್. —ಮಾನ್ಯ ಬಂಗಾರಪ್ಪನವರು ಕಳುಹಿಸಿರುವುದು ನನಗೆ ಗೊತ್ತಿಲ್ಲ.

ಅಧ್ಯಕ್ಷರು. —ನಿಮ್ಮ ನೋಟೀಸ್‌ಅನ್ನು ನೋಡುತ್ತೇನೆ, ಮಂತ್ರಿಗಳಿಗೆ ಕಣುಹಿಸಿಕೊಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್. —ಇಂಥ ಪ್ರಶ್ನೆಗಳು ಬಂದಾಗ ಮುಖ್ಯಮಂತ್ರಿಗಳು ದುರಾದೃಷ್ಟವಶಾತ್ ಈ ಸಂದರ್ಭದಲ್ಲಿ ಇರುವುದಿಲ್ಲ. ಹೋದ ಸಾರಿ ನನ್ನ ಒಂದು ಪ್ರಶ್ನೆಯ ಸಮಯದಲ್ಲಿಯೂ ಇವರು ಇರಲಿಲ್ಲ. ಆಗ ತಮ್ಮನ್ನು ಕೇಳಿದ, ಅವರು ಇಲ್ಲ ಏನು ಮಾಡುವುದು ಎಂದು ಹೇಳುತ್ತೀರಿ. ಇವತ್ತೂ ಇಲ್ಲ, ಸೋಮವಾರ ನೀವು ಇದನ್ನೇ ಹೇಳಬಹುದು. —ಮಂಗಳವಾರವೂ ಇದನ್ನೇ ಹೇಳಬಹುದು. ಈ ಪ್ರಶ್ನೆಗೆ ಸರ್ಕಾರದ ಉತ್ತರ ಅಮಂಗಳ ಎಂದು ಕಾಣುತ್ತದೆ. ಉತ್ತರ ಬಾರದೆ ಹೋದರೆ ನಮಗೆ ತೊಂದರೆಯಾಗುತ್ತದೆ. ದಯವಿಟ್ಟು ಇದರ ಬಗ್ಗೆ ಸೋಮವಾರದ ದಿವಸ ಉತ್ತರ ಒದಗಿಸಿಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು.

ಅಧ್ಯಕ್ಷರು. —ಚೀಫ್ ಮಿನಿಸ್ಟರ್‌ಗೆ ತಿಳಿಸುತ್ತೇನೆ.

ಶ್ರೀ ಎಂ ಎಸ್. ಕೃಷ್ಣನ್. —ಜವಾಬ್ದಾರಿಯುತವಾಗಿ ವರ್ತಿಸಿದ್ದಾರೆಯೇ ಇಲ್ಲವೇ ಎಂದು ಪ್ರಶ್ನೆ ಮಾಡಬೇಕಾದ ಪರಿಸ್ಥಿತಿ ಬರುತ್ತದೆ. ತಾವು ಕೋಪ ಮಾಡಿಕೊಳ್ಳಕೂಡದು.

ಶ್ರೀ ಕೋಣಂದೂರು ಲಿಂಗಪ್ಪ. —ಮಾನ್ಯ ಮುಖ್ಯಮಂತ್ರಿಗಳು ಹಾಜರು ಇಲ್ಲದೆ ಇರುವುದನ್ನು ನೋಡಿದರೆ ಮುಖ್ಯಮಂತ್ರಿಗಳನ್ನು ಹುಡುಕಿಕೊಟ್ಟವರಿಗೆ ಬಹುಮಾನ ಕೊಡುತ್ತೇವೆ ಎಂದು ಪತ್ರಿಕೆಯಲ್ಲಿ ಜಾಹಿರಾತು ಹಾಕುವ ಪರಿಸ್ಥಿತಿ ಬಂದಿದೆ.

ಶ್ರೀ ಎಸ್. ಬಂಗಾರಪ್ಪ. — ನಾನು ಕಾಡ ರೂಲ್ 312ರ ಪ್ರಕಾರ ನೋಟೀಸ್ ಕಳುಹಿಸಿದ್ದೇನೆ ಇದರ ಬಗ್ಗೆ ಖಚಿತವಾಗಿ ಸರ್ಕಾರದವರು ಯಾವಾಗ ಹೇಳಿಕೆ ಕೊಡುತ್ತಾರೆ ಎನ್ನುವುದು ಈ ಸದನಕ್ಕೆ ಗೊತ್ತಾಗಬೇಕು. ಇದು ಬಹಳ ಪ್ರಾಮುಖ್ಯವಾದ ವಿಷಯ.

12-00 NOON

ಅಧ್ಯಕ್ಷರು. —ಸರ್ಕಾರದವರಿಗೆ ಕಳುಹಿಸಿದ್ದೇವೆ. ಉತ್ತರ ಬಂದಾಗ ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ. —ಮಾನ್ಯ ಮಂತ್ರಿಗಳು ಬೇರೆಯವರು ಕುಳಿತಿದ್ದಾರೆ. ಬೇರೆ ವಿಷಯ ಬಂದಾಗ ಜಾಯಿಂಟ್ ರೆಸ್‌ಪಾನ್ಸಿಬಿಲಿಟಿ ಇರುವುದರಿಂದ ಇಂಥ ವಿಷಯದಲ್ಲಿ ಏತಕ್ಕೆ ರೆಸ್‌ಪಾನ್ಸಿಬಲಿಟಿ ಉಪಯೋಗಿಸಬಾರದು ?

ಅಧ್ಯಕ್ಷರು. —ನೋಟೀಸನ್ನು ಯಾವಾಗ ಕಳುಹಿಸಿದ್ದೇವೆ. ಅವರು ಇದನ್ನು ಹೇಳಬೇಕು ಇವರು ಹೇಗೆ ಹೇಳುವುದು ?

## Business of the House
## Absence of the Chief Minister

ಶ್ರೀ ಎಸ್. ಬಂಗಾರಪ್ಪ. —ಇನ್ನೊಂದು ವಿಷಯ ಮುಖ್ಯಮಂತ್ರಿಗಳ ಬಗ್ಗೆ ಪುನಃ ಪುನಃ ಹಲವಾರು ಬಾರಿ ಪ್ರಸ್ತಾಪವಾಗುತ್ತಾ ಇದ್ದರೂ ಆಕಡೆ ಕೂತಿರತಕ್ಕ ಸದಸ್ಯರು ಹೇಳದೆ ಇರು